**02/02/22** ಪ್ರಾತಃಮುರುಳಿ ಓಂಶಾಂತಿ ಬಾಪ್ದಾದಾ ಮಧುಬನ

"ಮಧುರ ಮಕ್ಕಳೇ - ನೀವೀಗ ಈಶ್ವರೀಯ ಖಜಾನೆಯಿಂದ ಪಾಲನೆ ಪಡೆಯುತ್ತಿದ್ದೀರಿ, ನಿಮ್ಮ ಕರ್ತವ್ಯವಾಗಿದೆ - ಜ್ಞಾನದ ಖಜಾನೆಯನ್ನು ಹಂಚಿ ಸರ್ವರ ಕಲ್ಯಾಣ ಮಾಡುವುದು"

ಪ್ರಶ್ನೆ: ಮಾಯೆಯ ಗ್ರಹಚಾರ ಬರುವ ಕಾರಣ ಮಕ್ಕಳು ಯಾವ ವಂಡರ್ಫುಲ್ (ವಿಚಿತ್ರ) ಆಟ ಆಡುತ್ತಾರೆ?

ಉತ್ತರ: ಯಾವಾಗ ಗ್ರಹಚಾರ ಬರುತ್ತದೆ ಆಗ ಇಂತಹ ಶ್ರೇಷ್ಠಾತಿ ಶ್ರೇಷ್ಠ ತಂದೆ, ಶಿಕ್ಷಕ ಹಾಗೂ ಸದ್ಗುರು ಈ ಮೂರು ಸಂಬಂಧವನ್ನು ಮರೆತುಬಿಡುತ್ತಾರೆ. ತುಂಬಾ ಒಳ್ಳೆಯ ಒಳ್ಳೆಯ ನಿಶ್ಚಯಬುದ್ಧಿವುಳ್ಳ ಮಕ್ಕಳೂ ಸಹ 'ನಾವು ಒಪ್ಪುವುದಿಲ್ಲ' ಎಂದು ಹೇಳುವುದೂ ಸಹ ಆಶ್ಚರ್ಯವಾಗಿದೆ. ಆಶ್ಚರ್ಯವಾಗಿ ಕೇಳುತ್ತಾರೆ, ಹೇಳುತ್ತಾರೆ, ತಂದೆಯನ್ನು ಬಿಟ್ಟು ಹೊರಟು ಹೋಗುತ್ತಾರೆ. ಇಂದು ಮಮ್ಮಾ ಬಾಬಾ ಎಂದು ಹೇಳಿ ನಾಳೆ ಮಾಯೆಗೆ ವಶವಾಗಿ ಬಿಡುತ್ತಾರೆ. ಮಾಯೆಗೆ ವಶವಾಗುವುದು ಗೊತ್ತಾಗುವುದೇ ಇಲ್ಲ, ಆದರೂ ತಂದೆ ತಿಳಿಸುತ್ತಾರೆ - ಪುನಃ ಎಲ್ಲರೂ ಬಂದೇ ಬರುತ್ತಾರೆ. ಏಕೆಂದರೆ ಸರ್ವರಿಗೂ ಒಬ್ಬ ತಂದೆಯ ಬಳಿಯೇ ಆಶ್ರಯ ಸಿಗಬೇಕಾಗಿದೆ.

ಗೀತೆ: ಓಂ ನಮಃ ಶಿವಾಯಃ.........................

ಓಂ ಶಾಂತಿ. ಈ ಗೀತೆಯನ್ನು ಮಕ್ಕಳು ಸಮಯ ಪ್ರತಿ ಸಮಯ ಕೇಳುತ್ತಾ ತಮ್ಮ ಪಾರಲೌಕಿಕ ಪರಮಪಿತ ಪರಮಾತ್ಮನನ್ನು ನೆನಪು ಮಾಡುತ್ತೀರಿ. ಯಾರ ಮೂಲಕ ಅಲ್ಪ ಸ್ವಲ್ಪ ಸುಖ ಸಿಗುತ್ತದೆ ಅವರನ್ನು ನೆನಪು ಮಾಡುತ್ತಾರೆ. ಕಾಶಿಯಲ್ಲಿ ಶಿವನ ಮಂದಿರವಿದೆ. ಅಲ್ಲಿಗೆ ಬಹಳ ಜನ ಹೋಗುತ್ತಾರೆ ಹಾಗೂ ನಿರಾಕಾರ ತಂದೆಯನ್ನು ನೆನಪು ಮಾಡುತ್ತಾರೆ. ಹೇಗೆ ಲಕ್ಷ್ಮೀ-ನಾರಾಯಣರನ್ನು ಎಲ್ಲರೂ ನೆನಪು ಮಾಡುತ್ತಾರೆ, ಏಕೆಂದರೆ ಅವರ ರಾಜ್ಯದಲ್ಲಿ ಸುಖವಿತ್ತು. ಆದುದರಿಂದಲೇ ರಾಜಾ-ರಾಣಿಯ ಮಹಿಮೆ ಮಾಡುತ್ತಾರೆ. ಓ ಪರಮಪಿತ ಪರಮಾತ್ಮ ಎಂದು ಇಡೀ ಜಗತ್ತು ನೆನಪು ಮಾಡುತ್ತದೆ. ಜಗತ್ಪಿತ ಒಬ್ಬರೇ ಆಗಿದ್ದಾರೆ. ಬೇರೆ ಯಾರಿಗೂ ಜಗತ್ಪಿತನೆಂದು ಹೇಳುವುದಿಲ್ಲ, ವಿಶ್ವಪಿತನೆಂದು ಒಬ್ಬ ನಿರಾಕಾರ ಪರಮಾತ್ಮನಿಗೇ ಹೇಳಲಾಗುತ್ತದೆ. ಅವರು ಒಬ್ಬರಿಗೆ ಮಾತ್ರ ಅವತಾರ ಅರ್ಥಾತ್ ಪುನರ್ಜನ್ಮ ರಹಿತನೆಂದು ಹೇಳುತ್ತಾರೆ. ಆ ಒಬ್ಬ ತಂದೆಗೆ ಮಾತ್ರ ತಮ್ಮ ಸೂಕ್ಷ್ಮ ಅಥವಾ ಸ್ಥೂಲ ಶರೀರವಿಲ್ಲ. ಬ್ರಹ್ಮಾ, ವಿಷ್ಣು, ಶಂಕರನಿಗೂ ಸೂಕ್ಷ್ಮಶರೀರವಿದೆ. ಅವರಿಗೂ ಸಹ ಅವತಾರವೆಂದು ಹೇಳುವುದಿಲ್ಲ. "ಅವತಾರ" ಎಂಬ ಅಕ್ಷರ ತುಂಬಾ ಶ್ರೇಷ್ಠವಾಗಿದೆ. ಅವರು ಸರ್ವರಿಗೂ ಪಿತ, ಸರ್ವರಿಗೂ ಸುಖ ಕೊಡುವಂತಹ ಪತಿತ ಪಾವನ ಆಗಿದ್ದಾರೆ. ಪರಮಧಾಮದಿಂದ ಬರುವಂತಹ ಎಲ್ಲಾ ಮನುಷ್ಯಾತ್ಮರು ಮೊದಲು ಸತೋಪ್ರಧಾನ, ನಂತರ ಸತೋ, ರಜೋ, ತಮೋದಲ್ಲಿ ಬರುತ್ತಾರೆ. ಅವರು ಪತಿತ ದುಃಖಿಗಳಾಗಲೇಬೇಕಾಗಿದೆ. ಎಲ್ಲರೂ ಪುನರ್ಜನ್ಮ ಪಡೆಯುತ್ತಾರಲ್ಲವೇ. ಬ್ರಹ್ಮಾರವರಿಗೂ ಸಹ ಮನುಷ್ಯರೆಂದು ಹೇಳಲಾಗುತ್ತದೆ, ವಿಷ್ಣುವಿನ ಎರಡು ರೂಪ ಲಕ್ಷ್ಮೀ-ನಾರಾಯಣರಿಗೂ ಮನುಷ್ಯರೆಂದು ಕರೆಯಲಾಗುತ್ತದೆ. ಈ ರೀತಿ ಅವರಿಗೂ ಸಹ ನಾವು ಅವತಾರವೆಂದು ಹೇಳಲಾಗುವುದಿಲ್ಲ. ಕೇವಲ ಅವತರಣೆ ಆಗುವವರು ಒಬ್ಬರೇ ಆಗಿದ್ದಾರೆ. ತಂದೆಯು ಮಕ್ಕಳಿಗೆ ಆಸ್ತಿಯನ್ನು ಕೊಡಲು ಇಡೀ ಪ್ರಪಂಚ ಪತಿತವಾದಾಗ ಅವರು ಬರುತ್ತಾರೆ. ಮನುಷ್ಯ ಮಾತ್ರರೆಲ್ಲರೂ ಪರಮಪಿತ ಪರಮಾತ್ಮನ ರಚನೆಯಾಗಿದ್ದಾರೆ. ಭಿನ್ನ ನಾಮ ರೂಪದಿಂದ ಎಲ್ಲರೂ ಪರಮಪಿತನೆಂದು ಅವಶ್ಯಕವಾಗಿ ಹೇಳುತ್ತಾರೆ. ಪ್ರತಿಯೊಂದು ಆತ್ಮನ ಬುದ್ಧಿ ಆ ತಂದೆಯನ್ನು ನೆನಪು ಮಾಡುತ್ತದೆ. ಬ್ರಹ್ಮಾ, ವಿಷ್ಣು ಶಂಕರರನ್ನು ನೆನಪು ಮಾಡುವುದಿಲ್ಲ. ಬ್ರಹ್ಮಾ, ವಿಷ್ಣು, ಶಂಕರರಿಗೆ ತಂದೆ ಎಂದು ಹೇಳುವುದಿಲ್ಲ. ತಂದೆಯೆಂದು ಒಬ್ಬ ರಚೈತನಿಗೆ ಹೇಳಲಾಗುವುದು. ಯಾವಾಗ ಸಂಗಮಯುಗವಾಗುತ್ತದೆ ಆಗ ಮನುಷ್ಯರೆಲ್ಲರೂ ಪತಿತರಾಗಿ ಬಿಡುತ್ತಾರೆ. ತಂದೆಯು ಕಲ್ಪದ ಸಂಗಮಯುಗದಲ್ಲಿ ಕಲಿಯುಗವನ್ನು ಸತ್ಯಯುಗವನ್ನಾಗಿ ಮಾಡಲು ಅವತರಣೆಯಾಗುತ್ತಾರೆ. ರಚೈತ ಒಬ್ಬರೇ ಆಗಿದ್ದಾರೆ. ಬ್ರಹ್ಮಾರವರ ಮೂಲಕ ಸ್ಥಾಪನೆ, ಶಂಕರನ ಮೂಲಕ ವಿನಾಶ, ವಿಷ್ಣುವಿನ ಮೂಲಕ ಪಾಲನೆ ಮಾಡಿಸುವುದನ್ನು ತೋರಿಸುತ್ತಾರೆ. ಅವರು ಭಾರತದಲ್ಲಿಯೇ ಬರುತ್ತಾರೆ. ಶಿವರಾತ್ರಿಯನ್ನೂ ಸಹ ಭಾರತದಲ್ಲಿಯೇ ಆಚರಣೆ ಮಾಡಲಾಗುತ್ತದೆ. ಆದರೆ ಶಿವನ ನಾಮ, ರೂಪ, ದೇಶ, ಕಾಲ ಯಾವುದೆಂದು ತಿಳಿದುಕೊಂಡಿಲ್ಲ! ನನ್ನನ್ನು ಅರಿಯದ ಕಾರಣ ಸರ್ವವ್ಯಾಪಿ ಎಂದು ಹೇಳುತ್ತಾ ನನ್ನನ್ನು ಬಹಳ ನಿಂದನೆ ಮಾಡಿ ಬಿಟ್ಟಿದ್ದಾರೆ. ಈ ಕಾರಣದಿಂದ ಭಾರತವಾಸಿಯರು ಸಂಪೂರ್ಣ ಪತಿತರಾಗಿ ಬಿಟ್ಟರು. ಯಾವಾಗ ಭಾರತದಲ್ಲಿ ಎಲ್ಲರೂ ಪತಿತರಾಗಿ ಬಿಡುತ್ತಾರೋ ಆಗ ನಾನು ಪುನಃ ಬರುತ್ತೇನೆ. ಕಲಿಯುಗದಲ್ಲಿ ಯಾರೂ ಸಹ ಪುಣ್ಯಾತ್ಮ, ಪವಿತ್ರ ಆತ್ಮ ಇರಲು ಸಾಧ್ಯವಿಲ್ಲ. ಪವಿತ್ರ ಪ್ರಪಂಚದಲ್ಲಿ ಪವಿತ್ರ ಆತ್ಮಗಳಿರುತ್ತಾರೆ, ಅದನ್ನು ಸಂಪೂರ್ಣ ನಿರ್ವಿಕಾರಿ ಪ್ರಪಂಚವೆಂದು ಹೇಳಲಾಗುವುದು. ಅದರ ಹೋಲಿಕೆಯಲ್ಲಿ ಕಲಿಯುಗೀ ವಿಕಾರಿ ಪ್ರಪಂಚವಾಗಿದೆ. ಕಲಿಯುಗದ ಅಂತ್ಯ ಹಾಗೂ ಸತ್ಯಯುಗದ ಆದಿ ಸಮಯವನ್ನು ಸಂಗಮವೆಂದು ಹೇಳಲಾಗುವುದು. ದ್ವಾಪರ ಹಾಗೂ ತ್ರೇತಾದ ಸಮಯವನ್ನು ಸೇರಿಸುವುದಿಲ್ಲ. ಅಂತ್ಯ ಅಂದರೆ ಇಡೀ ಹಳೆಯ ಪ್ರಪಂಚದ ಅಂತ್ಯ ಹಾಗೂ ಹೊಸ ಪ್ರಪಂಚದ ಆದಿ ಸಮಯವಾಗಿದೆ. ಸತ್ಯಯುಗವು ಪಾವನ ಪ್ರಪಂಚವಾಗಿದೆ, ನಂತರ ಕಲೆಗಳು ಕಡಿಮೆಯಾಗುತ್ತಾ ಹೋಗುತ್ತದೆ. ಸತ್ಯಯುಗ, ತ್ರೇತಾಯುಗವನ್ನು ಒಂದೇ ಸಮಾನ ಇಡಲಾಗುವುದಿಲ್ಲ. ನನ್ನನ್ನು ಮಕ್ಕಳು ನಂಬರ್ವಾರ್ ತಿಳಿದುಕೊಂಡಿದ್ದಾರೆಂದು ತಂದೆ ತಿಳಿಸುತ್ತಾರೆ. ಈ ಮಾತನ್ನು ಈ ಸಮಯಕ್ಕೆ ಮಾತ್ರ

ಹೇಳಲಾಗುತ್ತದೆ ಏಕೆಂದರೆ ಮಾಯೆ ನಮ್ಮ ಮುಂದೆ ನಿಂತಿದೆ ಹಾಗೂ ಮತ್ತೆ-ಮತ್ತೆ ಮರೆಸಿ ಬಿಡುತ್ತದೆ. ನಾವು ಬ್ರಹ್ಮನ ಮಕ್ಕಳು, ಶಿವನಿಗೆ ಮೊಮ್ಮಕ್ಕಳೆಂದು ಹೇಳುತ್ತಾ ತಂದೆಯನ್ನು ಮರೆತು ಬಿಡುತ್ತಾರೆ. ಅಜ್ಞಾನ ಕಾಲದಲ್ಲಿ ಈ ರೀತಿ ಎಂದಿಗೂ ಮರೆಯುವುದಿಲ್ಲ. ಇಲ್ಲಿಯಾದರೂ ಎದುರಿನಲ್ಲಿಯೇ ನಾವು ಬ್ರಹ್ಮನ ಮಕ್ಕಳಲ್ಲವೆಂದು ಹೇಳುತ್ತಾ ಮತ್ತೆ ಎಂದಿಗೂ ನೆನಪು ಮಾಡದಷ್ಟು ಮರೆತು ಹೋಗುತ್ತಾರೆ. ಇದು ಒಂದು ಅತಿ ದೊಡ್ಡ ಆಶ್ಚರ್ಯವಾಗಿದೆ. ಸ್ವರ್ಗ ಮಾಡುವವರು ಪರಮಪಿತ ಪರಮಾತ್ಮ ಹಾಗೂ ನರಕ ಮಾಡುವವರು ಮಾಯಾ ರಾವಣನೆಂದು ಭಾರತವಾಸಿಗಳು ತಿಳಿದುಕೊಂಡಿದ್ದಾರೆ. ಆದರೂ ಸಹ ಈ ಎರಡು ಮಾತನ್ನು ಮರೆತು ಬಿಡುತ್ತಾರೆ. ತಂದೆಯನ್ನು ಹಾಗೂ ರಾವಣನನ್ನು ತಿಳಿದುಕೊಳ್ಳುವುದಿಲ್ಲ. ಶಿವನನ್ನು ಪೂಜಿಸುತ್ತಾರೆ ಹಾಗೂ ರಾವಣನನ್ನು ಸುಡುತ್ತಾರೆ, ಆಶ್ಚರ್ಯವೇನೆಂದರೆ ಯಾರನ್ನು ಪೂಜೆ ಮಾಡುತ್ತಾರೆ ಅವರ ಕರ್ತವ್ಯ , ಜೀವನ ಚರಿತ್ರೆಯನ್ನು ತಿಳಿದುಕೊಂಡಿಲ್ಲ. ಹಾಗೂ ಯಾವ ರಾವಣನನ್ನು ಸುಡುತ್ತಾರೆ, ಆ ರಾವಣನೆಂಬ ವಸ್ತು ಏನಾಗಿದೆ ಎಂದು ಯಾರೂ ತಿಳಿದುಕೊಂಡಿಲ್ಲ. ಮನುಷ್ಯ ಮಾತ್ರರು ಅರ್ಥಾತ್ ಯಥಾ ರಾಜಾ ರಾಣಿ ತಥಾ ಪ್ರಜೆಗಳೆಲ್ಲರೂ ತುಚ್ಛ ಬುದ್ಧಿಯವರಾಗಿದ್ದಾರೆ. ತಂದೆ ತಿಳಿಸಿ ಕೊಡುತ್ತಾರೆ ಯಾರೆಲ್ಲಾ ಧರ್ಮ ಸ್ಥಾಪನೆ ಮಾಡಲು ಬರುತ್ತಾರೆ ಅವರಿಗೆ ಪುನಃ ಅವತರಣೆ ಎಂದು ಹೇಳುವುದಿಲ್ಲ. ಒಬ್ಬ ತಂದೆಯ ಅವತರಣೆ ಭಾರತದಲ್ಲಿಯೇ ಆಗುತ್ತದೆ. ಆದರೆ ಭಾರತವಾಸಿಯರು ಸ್ವಯಂ ಮರೆತು ಹೋಗುತ್ತಾರೆ. ಪರಮಪಿತ ಪರಮಾತ್ಮನ ಪೂಜೆ ಮಾಡುತ್ತಾರೆ ಆದರೆ ಅವರು ಯಾವಾಗ ಬಂದರು ಏನು ಮಾಡಿದರು ಏನನ್ನು ತಿಳಿದುಕೊಂಡಿಲ್ಲ. ತಂದೆಯನ್ನು, ರಚನೆಯ ಆದಿ-ಮಧ್ಯ-ಅಂತ್ಯವನ್ನು ತಿಳಿದುಕೊಂಡಿಲ್ಲ ಹಾಗೂ ದೇವೀ-ದೇವತೆಗಳ ಜೀವನ ಚರಿತ್ರೆಯನ್ನು ಅರಿಯದ ಕಾರಣ ದುಃಖಿಗಳಾಗಿದ್ದಾರೆ. ಮೊದಲು ಭಾರತವಾಸಿಗಳು ಎಷ್ಟೊಂದು ಸುಖಿಗಳಾಗಿದ್ದರು, ಇಡೀ ವಿಶ್ವದ ಮಾಲೀಕರಾಗಿದ್ದರು. ನಾವು ಪಾವನ ಶ್ರೇಷ್ಠಾಚಾರಿಗಳೆಂದು ಭಾರತೀಯರು ತಿಳಿದುಕೊಂಡಿಲ್ಲ. ಒಂದುವೇಳೆ ಪಾವನ ಶ್ರೇಷ್ಠಾಚಾರಿಗಳು ಆಗಿದ್ದೇವೆಂದಾಗ ಹೇಗೆ ಆದೆವು? ಸ್ವಲ್ಪವನ್ನು ತಿಳಿದುಕೊಳ್ಳದೆ ಇರುವುದೂ ಸಹ ಆಶ್ಚರ್ಯವಾಗಿದೆ. ತಂದೆ ಎಷ್ಟೊಂದು ಸ್ಪಷ್ಟ ಮಾಡಿ ತಿಳಿಸಿಕೊಡುತ್ತಿದ್ದಾರೆ. ಯಾರಿಗೆ ತಿಳಿಸಿಕೊಡುತ್ತಾರೆ? ನನ್ನ ಮಕ್ಕಳಿಗೆ ತಿಳಿಸಿಕೊಡುತ್ತೇನೆ. ಮಕ್ಕಳ ಮುಂದೆ ಮಾತ್ರ ಪ್ರತ್ಯಕ್ಷವಾಗುತ್ತೇನೆ. ಆದರೆ ಮಕ್ಕಳು ಸಹ ತಂದೆಯ ಮುಂದೆ ಬರಬೇಕು, ಮಮ್ಮಾ ಬಾಬಾ ಎಂದು ಹೇಳಿ ನಂತರ ಮರೆತು ಬಿಡುವುದು ಆಶ್ಚರ್ಯವಾಗಿದೆ. ಅಜ್ಞಾನ ಕಾಲದಲ್ಲಿ ಎಂದಿಗೂ ತಂದೆ ಶಿಕ್ಷಕ ಗುರುವನ್ನು ಮರೆಯಲಾರರು. ಇಲ್ಲಿ ಪಾರಲೌಕಿಕ ತಂದೆ ಎಷ್ಟೊಂದು ಶ್ರೇಷ್ಠರಾಗಿದ್ದಾರೆ, ಅವರು ಎಲ್ಲರ ದುಃಖ ದೂರ ಮಾಡುತ್ತಾರೆ. ಆದರೆ ಅವರನ್ನೇ ಮರೆತು ಹೋಗುತ್ತಾರೆ, ಆದುದರಿಂದ ಆಶ್ಚರ್ಯವಾಗಿ ಕೇಳುತ್ತಾ, ಅನ್ಯರಿಗೂ ಹೇಳುತ್ತಾ ಓಹೋ! ಮಾಯೆಗೆ ವಶವಾಗಿ ಬಿಡುತ್ತಾರೆಂದು ಹೇಳಲಾಗುತ್ತದೆ. ಮಾಯೆ ಎಷ್ಟೊಂದು ಪ್ರಬಲವಾಗಿದೆ. ಬೇಹದ್ದಿನ ತಂದೆಗೆ ಮಕ್ಕಳಾಗಿ ಶಿಕ್ಷಕನೆಂದು ತಿಳಿದು ಅವರಿಂದ ಓದುತ್ತಾ, ಪತಿತ ಪಾವನ ಸದ್ಗುರುವನ್ನು ಪಕ್ಕಾ ತಿಳಿದುಕೊಂಡು ನಂತರ ಈ ಮೂರು ಸಂಬಂಧವನ್ನು ಮರೆತು ಹೋಗುತ್ತಾರೆ. ಒಬ್ಬರನ್ನು ಮರೆತರೆ ಮೂರು ಸಂಬಂಧವನ್ನು ಮರೆತು ಬಿಡುತ್ತಾರೆ. ಒಬ್ಬರನ್ನು ನೆನಪು ಮಾಡಿದಾಗ ಮೂರು ಸಂಬಂಧವೂ ನೆನಪಿರುತ್ತದೆ. ಏಕೆಂದರೆ ಈ ಮೂರು ಸಂಬಂಧವೂ ಕಂಬೈಂಡ್ ಆಗಿದೆ. ಸ್ವಯಂ ತಂದೆ ಅಕ್ಯುರೇಟ್ ಆಗಿ ಶಿಕ್ಷಕ ಹಾಗೂ ಸದ್ಗುರು ಆಗಿದ್ದಾರೆ. ಸ್ವಯಂ ತಂದೆ ತಿಳಿಸುತ್ತಾರೆ ನಾನು ತಂದೆಯಾಗಿ ನಿಮ್ಮೆಲ್ಲರನ್ನು ಅಗತ್ಯವಾಗಿ ಪರಮಧಾಮಕ್ಕೆ ಕರೆದುಕೊಂಡು ಹೋಗುತ್ತೇನೆ. ನಾನು ನಿಮ್ಮ ಶಿಕ್ಷಕನಾಗಿದ್ದೇನೆ. ಓದಿಸಿ ನಿಮ್ಮನ್ನು ಅಗತ್ಯವಾಗಿ ರಾಜರಿಗೂ ರಾಜರನ್ನಾಗಿ ಮಾಡುತ್ತೇನೆ. ನಾನು ಸದ್ಗುರು ಆಗಿದ್ದೇನೆ, ಮಕ್ಕಳೆಲ್ಲರನ್ನು ನಂಬರ್ವಾರ್ ಪುರುಷಾರ್ಥ ಅನುಸಾರ ಹಿಂತಿರುಗಿ ಕರೆದುಕೊಂಡು ಹೋಗುತ್ತೇನೆಂದು ತಂದೆಯು ಭರವಸೆ ಕೊಡುತ್ತಾರೆ. ಇಂತಹ ತಂದೆಯನ್ನು ನಡೆಯುತ್ತಾ-ನಡೆಯುತ್ತಾ ಮರೆತು ಹೋಗುತ್ತಾರೆ. ಇಂದು ತಂದೆ ಎಂದು ಹೇಳಿ ನಾಳೆ ನಮಗೆ ಸಂಶಯವಿದೆ ಎಂದು ಹೇಳುವಷ್ಟು ಮಾಯೆಯ ಗ್ರಹಚಾರದಲ್ಲಿ ಸಿಕ್ಕಿಕೊಂಡು ಬಿಡುತ್ತಾರೆ, ಈ ರೀತಿ ನಡೆಯುತ್ತಿರುತ್ತದೆ. ನಂತರ ಕೆಲವರು ಅಂತ್ಯದಲ್ಲಿ ಬಂದು ಆಸ್ತಿಯನ್ನು ತೆಗೆದುಕೊಳ್ಳುತ್ತಾರೆ. ಗ್ರಹಚಾರ ಬಿಡುಗಡೆ ಆದಾಗ ಬಂದು ಬಿಡುತ್ತಾರೆ. ಇದೂ ಸಹ ನಾಟಕದಲ್ಲಿ ನಿಗಧಿಯಾಗಿದೆ. ವಿನಾಶವಂತೂ ಆಗಿಯೇ ಆಗುತ್ತದೆ, ಆಗ ಯಾರ ಆಶ್ರಯವನ್ನು ಪಡೆಯುವರು? ಸರ್ವರ ಸದ್ಗತಿದಾತನಂತೂ ಒಬ್ಬರೇ ಆಗಿದ್ದಾರೆ. ಎಲ್ಲರನ್ನು ತನ್ನ ಆಶ್ರಯದಲ್ಲಿ ತೆಗೆದುಕೊಳ್ಳುವವರು ಸಹ ಅವರೇ ಆಗಿದ್ದಾರೆ, ಸರ್ವರೂ ಅವರ ಮುಂದೆ ತಲೆ ಬಾಗುವವರಾಗಿದ್ದಾರೆ. ಆದರೆ ವಿನಾಶವಾಗುವ ಸಮಯದಲ್ಲಿ ಏನು ಮಾಡಲು ಸಾಧ್ಯವಾಗುತ್ತದೆ. ಒಂದುವೇಳೆ ವಿಶ್ವ ಪರಿವರ್ತನೆ ಆಗದಿದ್ದರೆ ಇಷ್ಟೊಂದು ಜನ ಒಂದೇ ಸಮಯದಲ್ಲಿ ಬರಲಾಗದು. ಈ ಆಟ ಅಥವಾ ನಾಟಕವು ತುಂಬಾ ಅದ್ಭುತವಾಗಿ ಮಾಡಲ್ಪಟ್ಟಿದೆ. ಇಷ್ಟೊಂದು ಜನರು ಬಂದು ಏನು ಮಾಡುತ್ತಾರೆ? ಮತ್ತೆ ಅತಿ ವೇಗವಾಗಿ ವಿಶ್ವ ಪರಿವರ್ತನೆಯ ವಿನಾಶವು ನಮ್ಮ ಮುಂದೆ ಬಂದು ಬಿಡುತ್ತದೆ. ಹಾ! ತಂದೆ ತಿಳಿಸುತ್ತಾರೆ ನನ್ನನ್ನು ನೆನಪು ಮಾಡಿ, ಈಗ ಮನೆಗೆ ಹಿಂತಿರುಗಬೇಕಾಗಿದೆ ಎಂಬ ಸಂದೇಶವನ್ನು ಎಲ್ಲರೂ ಕೇಳುತ್ತಾರೆ. ಉಳಿದ ಹಾಗೆ ಮಿಲನ ಮಾಡುವುದರಿಂದ ಏನು ಲಾಭವಿದೆ. ತಂದೆ ಮಾರ್ಗದರ್ಶನ ನೀಡುತ್ತಾರೆ - ಒಂದುವೇಳೆ ನೀವು ವಿದೇಶದಲ್ಲಿದ್ದರೂ ಸಹ ತಂದೆಯನ್ನು ನೆನಪು ಮಾಡುತ್ತಿದ್ದರೆ ವಿಕರ್ಮ ವಿನಾಶವಾಗಿ ಬಿಡುತ್ತದೆ. ಅಂತ್ಯಮತಿ ಸೋ ಗತಿ ಆಗುತ್ತದೆ. ಎಲ್ಲರಿಗೂ ಸಂದೇಶ ಸಿಗಲೇಬೇಕಾಗುತ್ತದೆ. ಒಂದೇ ಸ್ಥಾನದಲ್ಲಿ ಇಷ್ಟೊಂದು ಆತ್ಮಗಳಿಗೆ ಸಂದೇಶ ಸಿಗುವುದಿಲ್ಲ. ಆದರೆ ಈ ನಾಟಕ ತುಂಬಾ ವಂಡರ್ಫುಲ್ ಆಗಿ ಮಾಡಲ್ಪಟ್ಟಿದೆ. ತಂದೆ ಅವತರಣೆ ಆಗಿದ್ದಾರೆಂದು ಎಲ್ಲರಿಗೂ ತಿಳಿಯುತ್ತದೆ. ಕ್ರೈಸ್ತರೆಲ್ಲರೂ ಪೋಪ್ರವರೊಂದಿಗೆ ಮಿಲನ ಮಾಡುತ್ತಾರೆ. ಎಲ್ಲರೂ ತಲುಪಲು ಆಗುವುದಿಲ್ಲ. ಹಾಗೆಯೇ ಇದೂ ಸಹ ಅಂತಿಮದಲ್ಲಿ ಎಲ್ಲರಿಗೂ ತಿಳಿಯುತ್ತದೆ - ತಂದೆ ಬಂದಿದ್ದಾರೆ ಎಲ್ಲರನ್ನೂ ಮುಕ್ತ ಮಾಡಿ ಕರೆದೊಯ್ಯುತ್ತಾರೆ. ಎಷ್ಟೊಂದು ಭಯಾನಕ ವಿನಾಶ ಆಗುವುದಿದೆ? ರುದ್ರ ಮಾಲೆ ತುಂಬಾ ದೊಡ್ಡದಾಗಿದೆ. ಅದರ ಹೋಲಿಕೆಯಲ್ಲಿ ವಿಷ್ಣು ಮಾಲೆ ತುಂಬಾ ಚಿಕ್ಕದಾಗಿದೆ. ನಿಮ್ಮೆಲ್ಲರಿಗೂ ವಿಷ್ಣು ಮಾಲೆ ಎಂದು ಹೇಳಬಹುದು.

ಮೊಟ್ಟ ಮೊದಲನೆಯವರು ವಿಷ್ಣು ಆಗಿದ್ದಾರೆ. ಮನುಷ್ಯಾತ್ಮರ ಪ್ರಪ್ರಥಮ ಮಹಾಪಿತ ಬ್ರಹ್ಮಾ ಆಗಿದ್ದಾರೆ. ಬ್ರಹ್ಮಾ ನಂತರ ವಿಷ್ಣು ಆಗುತ್ತಾರೆ. ವಿಷ್ಣುವಿನ ಎರಡು ರೂಪ ಲಕ್ಷ್ಮೀ-ನಾರಾಯಣರಾಗುತ್ತಾರೆ. ಸ್ವಲ್ಪವೂ ವ್ಯತ್ಯಾಸವಾಗುವುದಿಲ್ಲ. ಈ ಮಾತುಗಳು ತುಂಬಾ ಆಶ್ಚರ್ಯಕರವಾಗಿವೆ, ಇವುಗಳನ್ನು ಸ್ಮರಣೆ ಮಾಡುವುದರಿಂದ ಖುಷಿಯಾಗುತ್ತದೆ. ತಂದೆಯು ತಿಳಿಸಿದ್ದಾರೆ - ಪುನರಾವತರಣೆ ಎಂದು ಕೇವಲ ಒಬ್ಬ ತಂದೆಗೆ ಕರೆಯಲಾಗುವುದು ಏಕೆಂದರೆ ಅವರಿಗೆ ತಮ್ಮದೇ ಆದ ಶರೀರವಿಲ್ಲ ಹಾಗೂ ಎಲ್ಲರಿಗೂ ತಮ್ಮ-ತಮ್ಮ ಶರೀರವಿದೆ. ತಂದೆಯು ಶರೀರದ ಆಧಾರ ತೆಗೆದುಕೊಳ್ಳಬೇಕಾಗುತ್ತದೆ. ಬೇರೆಯವರಿಗಂತೂ ತಮ್ಮ-ತಮ್ಮ ಶರೀರವಿದೆ. ಆಧಾರ (ಲೋನ್) ತೆಗೆದುಕೊಳ್ಳುವ ವಸ್ತು ಬೇರೆಯವರದಾಗಿರುತ್ತದೆ. ಯಾವುದೇ ಆತ್ಮ ನಾನು ಶರೀರವನ್ನು ಲೋನ್ ತೆಗೆದುಕೊಳ್ಳುತ್ತೇನೆಂದು ಹೇಳುವುದಿಲ್ಲ. ಇದು ನನ್ನ ಶರೀರವಾಗಿದೆ ಎಂದು ಆತ್ಮ ಹೇಳುತ್ತದೆ. ಶಿವ ತಂದೆಯು ಇದು ನನ್ನ ಶರೀರವಾಗಿದೆ ಎಂದು ಹೇಳಲು ಸಾಧ್ಯವಿಲ್ಲ. ಅವರು ಮಕ್ಕಳಿಗೆ ಜ್ಞಾನ ಹಾಗೂ ಯೋಗವನ್ನು ಕಲಿಸಲು ಕೇವಲ ಶರೀರದ ಆಧಾರ ತೆಗೆದುಕೊಳ್ಳುತ್ತಾರೆ. ತಂದೆ ಆಧಾರ ತೆಗೆದುಕೊಂಡಿದ್ದಾರೆ ಎನ್ನುವುದನ್ನು ನಾವು ಮತ್ತೆ ಮತ್ತೆ ಮರೆತು ಹೋಗುತ್ತೇವೆಂದು ಮಕ್ಕಳು ತಿಳಿದುಕೊಂಡಿದ್ದಾರೆ. ದೇಹಾಭಿಮಾನಿಯಾಗುವ ಕಾರಣ ತಂದೆಯ ಬಗ್ಗೆ ಗೌರವ ಕಡಿಮೆ ಆಗಿ ಬಿಡುತ್ತದೆ. ಇಲ್ಲವಾದರೆ ತಂದೆಯಾರಾಗಿದ್ದಾರೆ ಎಂದು ಒಂದುವೇಳೆ ತಿಳಿದುಕೊಂಡರೆ ಅವರ ಆಜ್ಞೆಯಂತೆ ನಡೆಯಬೇಕು. ಹೆಜ್ಜೆ-ಹೆಜ್ಜೆಯಲ್ಲಿ ಶ್ರೀಮತ ತೆಗೆದುಕೊಳ್ಳಬೇಕು. ಆದರೆ ಮಾಯೆಯೂ ಮರೆಸಿ ಬಿಡುತ್ತದೆ. ಆಗ ಒಮ್ಮೊಮ್ಮೆ ಶ್ರೀಮತದಂತೆ, ಒಮ್ಮೊಮ್ಮೆ ಅಸುರೀ ಮತದಂತೆ ನಡೆಯುತ್ತಾರೆ. ಕೆಲವೊಮ್ಮೆ ಭಾರಿಯಾಗಿ, ಕೆಲವೊಮ್ಮೆ ಹಗುರವಾಗಿ ನಡೆಯುತ್ತಾರೆ. ಕೆಲವೊಮ್ಮೆ ಅವರ ಮತದಂತೆ, ಕೆಲವೊಮ್ಮೆ ಮಾಯೆಯ ಮತದಂತೆ ನಡೆಯುತ್ತಿರುತ್ತಾರೆ. ಒಬ್ಬ ಶಿವತಂದೆಯ ಶ್ರೀಮತದಂತೆ ನಡೆಯುತ್ತಿದ್ದಾಗ ನಾವು ಯಥಾರ್ಥವಾಗಿ ಮುಂದುವರೆಯುತ್ತೇವೆ ಆದರೆ ತನ್ನ ಮತದಂತೆ ನಡೆಯುತ್ತಿರುತ್ತಾರೆ. ತಂದೆಯ ಸಲಹೆಯನ್ನು ತಮ್ಮ ಜೀವನದಲ್ಲಿ ಅಗತ್ಯವಾಗಿ ಅಳವಡಿಸಿಕೊಳ್ಳಬೇಕು. ಒಂದುವೇಳೆ ಏನಾದರೂ ನಡೆಯಿತೆಂದರೆ ನಾಟಕದ ಅನುಸಾರವಾಗಿ ನಡೆಯಿತೆಂದು ಹೇಳಲಾಗುವುದು. ರಾಜಧಾನಿಯು ಸ್ಥಾಪನೆ ಆಗಲೇಬೇಕಾಗಿದೆ, ಆದುದರಿಂದ ಸ್ವಲ್ಪವೂ ಏರು-ಪೇರಾಗುವುದಿಲ್ಲ. ತಂದೆಯನ್ನು ಮಿಲನ ಮಾಡಲು ಬಹಳ ಮಕ್ಕಳು ಬರುತ್ತಾರೆ, ಆದರೆ ಮನೆಗೆ ಹೋಗಿ ಮರೆತು ಬಿಡುತ್ತಾರೆ. ಸಂಪೂರ್ಣ ನಿಶ್ಚಯದಿಂದ ಬರುವುದಿಲ್ಲ. ಕೆಲವರಲ್ಲಿ 5% ನಿಶ್ಚಯವಿದ್ದರೆ ಕೆಲವರಲ್ಲಿ 15% ನಿಶ್ಚಯವಿದೆ. ಅಜ್ಞಾನ ಕಾಲದಲ್ಲಿ ಇವರು ನಮ್ಮ ಚಿಕ್ಕಪ್ಪ, ಮಾವ ಎಂದು ತಿಳಿದ ಮೇಲೆ ಎಂದಿಗೂ ಸಂಶಯದಲ್ಲಿ ಬರುವುದಿಲ್ಲ. ಇಲ್ಲಿಯೇ ಮಾಯೆ ಸಂಶಯದಲ್ಲಿ ತಂದು ಬೀಳಿಸಿ ಬಿಡುತ್ತದೆ ಅರ್ಥಾತ್ ನಿಶ್ಚಯವಿರುವುದೇ ಇಲ್ಲ. ನಿಶ್ಚಯವಿದ್ದು ಮತ್ತೆ ಮಾಯೆಗೆ ವಶರಾಗಿ ಬಿಡುತ್ತಾರೆ. ಇದು ಆಶ್ಚರ್ಯವೂ ಆಗಿದೆ. ಇಲ್ಲಿ ಒಬ್ಬರೇ ತಂದೆ, ಶಿಕ್ಷಕ, ಸದ್ಗುರು ಆಗಿದ್ದಾರೆ. ಪ್ರತಿಯೊಬ್ಬರೂ ನಂಬರ್‌ವಾರ್ ಪುರುಷಾರ್ಥದ ಅನುಸಾರ ಕಲ್ಪದ ಹಿಂದಿನಂತೆ ಜ್ಞಾನವನ್ನು ಪಡೆಯುತ್ತಾರೆ. ಕಲ್ಪದ ಹಿಂದೆ ಯಾರೆಷ್ಟು ಆಸ್ತಿ ಪಡೆದಿದ್ದರು, ಈಗ ಅದೇ ಪಾತ್ರ ಪ್ರತಿಯೊಬ್ಬರದೂ ನಡೆಯುತ್ತಿದೆ. ಈ ಸಮಯದಲ್ಲಿ ಬ್ರಾಹ್ಮಣರ ಮಾಲೆ ಆಗುವುದಿಲ್ಲ, ಏಕೆಂದರೆ ಗ್ರಹಚಾರ ಬರುವ ಕಾರಣ ಬಿದ್ದು ಹೋಗುತ್ತಾರೆ. ನಂತರ ಪ್ರಜೆಯ ಮಾಲೆಯಲ್ಲಿ ಬರುತ್ತಾರೆ. ಪ್ರಜೆಯಲ್ಲಿ ಒಮ್ಮೊಮ್ಮೆ ಒಂದೊಂದು ರೀತಿಯಲ್ಲಿ ಇರಬೇಕಾಗುತ್ತದೆ. ಅಗತ್ಯವಾಗಿ ಮಾಲೆಯಿದೆ ರುದ್ರ ಮಾಲೆ ಹಾಗೂ ವಿಷ್ಣು ಮಾಲೆಯಾಗಿದೆ. ರುದ್ರ ಮಾಲೆ ಆತ್ಮಿಕ ಮಾಲೆಯಾಗಿದೆ, ವಿಷ್ಣು ಮಾಲೆ ವಿಜಯಿಗಳಾದವರ ಮಾಲೆಯಾಗಿದೆ. ಇದನ್ನು ತಿಳಿದುಕೊಳ್ಳಲು ತುಂಬಾ ಶ್ರೇಷ್ಠ ವಿಶಾಲ ಹಾಗೂ ಸ್ವಚ್ಛ ಬುದ್ಧಿ ಬೇಕು. ಶ್ರೀಮತದಂತೆ ಪೂರ್ಣವಾಗಿ ನಡೆಯಬೇಕಾದರೆ ಪ್ರಾಮಾಣಿಕ ಹಾಗೂ ಆಜ್ಞಾಪಾಲಕರಾಗಬೇಕು. ಇದು ಶಿವ ತಂದೆಯ ಎಷ್ಟು ಶ್ರೇಷ್ಠ ಸೇವೆಯಾಗಿದೆ. ಪತಿತ ಪಾವನ ಬಾ ಎಂದು ಹೇಳುತ್ತಾರೆ. ತಂದೆ ಪಾವನ ಪ್ರಪಂಚದ ಸ್ಥಾಪನೆ ಮಾಡುತ್ತಾರೆ. ಪುನಃ ಅವರೇ ಪತಿತರಾಗುವರು. ಮತ್ತೆ ಅವರನ್ನು ಪಾವನ ಮಾಡಲು ತಂದೆ ಬರಬೇಕಾಗುತ್ತದೆ. ಈ ಸಮಯದಲ್ಲಿ ಎಷ್ಟೊಂದು ಆಶ್ಚರ್ಯ ಪಡುವಂತಹ ಪಾತ್ರ ನಡೆಯುತ್ತದೆ, ಆದುದರಿಂದ ಈ ಸಮಯ ಪರಮಪಿತ ಪರಮಾತ್ಮನ ಪಾತ್ರವು ಬಲಿಹಾರಿಯಾಗಿರುವ ಪಾತ್ರವಾಗಿದೆ. ನಂಬರ್‌ವನ್ ನೆನಪಾರ್ಥ ಒಬ್ಬ ತಂದೆಯದಾಗಿದೆ. ಯಾರು ಎಲ್ಲವನ್ನು ಮಾಡುತ್ತಾರೆ, ಅವರ ಜಯಂತಿಯನ್ನು ಆಚರಿಸುತ್ತಾರೆ. ಅವರು ಯಾರನ್ನು ಶ್ರೇಷ್ಠರನ್ನಾಗಿ ಮಾಡುತ್ತಾರೆ ಅವರ ಮಹಿಮೆಯೂ ಸಹ ಶ್ರೇಷ್ಠವಾಗಿರುತ್ತದೆ. ಬಾಕಿ ಈ ಸಮಯದ ಮನುಷ್ಯರೆಲ್ಲರು ಪತಿತ, ಭ್ರಷ್ಟಾಚಾರಿಗಳಾಗಿದ್ದಾರೆ. ಸತ್ಯಯುಗದಲ್ಲಿ ಶ್ರೇಷ್ಠಾಚಾರಿ, ಸ್ವರ್ಗದ ನಿವಾಸಿಗಳಾಗಿದ್ದರು, ಅಂದಾಗ ಇದು ಹಗಲು ರಾತ್ರಿಯ ಅಂತರವಿದೆ. ಈಗ ನಾವು ಶಿವತಂದೆಯಿಂದ ಆಸ್ತಿ ಪಡೆಯುತ್ತೇವೆ. ಈಗ ನಾವು ಏನು ಆಚರಿಸಬೇಕು? ಭಕ್ತಿ ಮಾರ್ಗದಲ್ಲಿ ಆಚರಿಸಲಾಗುತ್ತದೆ ಈ ಸಮಯ ನೀವು ಶ್ರೀಮತದಂತೆ ಪುರುಷಾರ್ಥ ಹಾಗು ಸೇವೆ ಮಾಡಬೇಕು. ಪ್ರದರ್ಶನದಲ್ಲಿ ತಿಳಿಸಿಕೊಡುವ ಪದ್ಧತಿ ತುಂಬಾ ಚೆನ್ನಾಗಿದೆ. ಈಶ್ವರೀಯ ಸೇವೆಯ ಕಡೆ ಮಕ್ಕಳು ಪೂರ್ಣ ಗಮನ ಕೊಡಬೇಕು. ಯಾರು ಈಶ್ವರೀಯ ಖಜಾನೆಯಿಂದ ಪಾಲನೆ ಪಡೆಯುತ್ತಾರೆಯೋ ಅವರು ಸಂಪೂರ್ಣವಾಗಿ ಸೇವೆ ಮಾಡಬೇಕು, ಅದರಿಂದ ಬಹಳ ಬೇಗನೆ ಮನುಷ್ಯರ ಕಲ್ಯಾಣವಾಗುವಂತಾಗಬೇಕು. ಒಳ್ಳೆಯದು.

ಮಧುರಾತಿ ಮಧುರ ಅಗಲಿ ಹೋಗಿ ಮರಳಿ ಸಿಕ್ಕಿರುವ ಮಕ್ಕಳ ಪ್ರತಿ ಮಾತಾಪಿತಾ ಬಾಪ್ದಾದಾರವರ ನೆನಪು, ಪ್ರೀತಿ ಹಾಗೂ ಸುಪ್ರಭಾತ. ಆತ್ಮಿಕ ಮಕ್ಕಳಿಗೆ ಆತ್ಮಿಕ ತಂದೆಯ ನಮಸ್ತೆ.

ಧಾರಣೆಗಾಗಿ ಮುಖ್ಯಸಾರ:

1. ಏರುವ ಕಲೆಯಲ್ಲಿ ಹೋಗುವ ಸಲುವಾಗಿ ಹೆಜ್ಜೆ-ಹೆಜ್ಜೆಯಲ್ಲಿ ಶ್ರೀಮತದಂತೆ ನಡೆಯಬೇಕು. ತಂದೆಯನ್ನು ಯಥಾರ್ಥವಾಗಿ

ತಿಳಿದುಕೊಂಡು, ದೇಹೀ-ಅಭಿಮಾನಿಯಾಗಿ ಪೂರ್ತಿ ಗೌರವ ಇಟ್ಟುಕೊಳ್ಳಬೇಕು.

2. ಈಶ್ವರೀಯ ಸೇವೆಯಲ್ಲಿ ಪೂರ್ಣ ಗಮನ ಕೊಡಬೇಕು. ನೆನಪಿನಿಂದ ಬುದ್ಧಿಯನ್ನು ಸ್ವಚ್ಛ ಹಾಗೂ ವಿಶಾಲ ಮಾಡಿಕೊಳ್ಳಬೇಕು.

ವರದಾನ: ಜ್ಞಾನದ ಪ್ರಕಾಶತೆ ಹಾಗೂ ಶಕ್ತಿಯ ಮೂಲಕ ಆತ್ಮಾಭಿಮಾನಿ ಆಗಿರುವಂತಹ ಸ್ಮೃತಿ ಸ್ವರೂಪ ಭವ.

ತಮ್ಮ ಅನಾದಿ ರೂಪವು ನಿರಾಕಾರ ಜ್ಯೋತಿ ಸ್ವರೂಪ ಆತ್ಮವಾಗಿದೆ ಹಾಗೂ ಆದಿ ಸ್ವರೂಪವು ದೇವಾತ್ಮನಾಗಿರುವುದು. ಯಾವಾಗ ಜ್ಞಾನದ ಪ್ರಕಾಶತೆ ಹಾಗೂ ಶಕ್ತಿಯ ಆಧಾರದಿಂದ ಆತ್ಮಾಭಿಮಾನಿ ಸ್ಥಿತಿಯಲ್ಲಿರುವ ಅಭ್ಯಾಸವಾಗುವುದೋ ಆಗ ಇವೆರಡೂ ಸ್ವರೂಪಗಳಲ್ಲಿರುತ್ತೀರಿ. ಬ್ರಾಹ್ಮಣರಾಗುವುದು ಅರ್ಥಾತ್ ಜ್ಞಾನದ ಪ್ರಕಾಶತೆ ಹಾಗೂ ಶಕ್ತಿಯ ಸ್ಮೃತಿ ಸ್ವರೂಪರಾಗುವುದು. ಯಾರು ಸ್ಮೃತಿ ಸ್ವರೂಪರಾಗಿದ್ದಾರೆಯೋ ಅವರು ಸ್ವಯಂ ಸಹ ಸಂತುಷ್ಟವಾಗಿ ಇರುತ್ತಾರೆ ಹಾಗೂ ಅನ್ಯರನ್ನೂ ಸಂತುಷ್ಟ ಪಡಿಸುತ್ತಾರೆ.

ಸ್ಲೋಗನ್: ಸಾಧಾರಣತೆಯಲ್ಲಿ ಮಹಾನತೆಯ ಅನುಭವ ಮಾಡುವುದೇ ಮಹಾನ್ ಆತ್ಮನಾಗುವುದಾಗಿದೆ.